**EP No.2/2024**
**ಪಿ.ಡಬ್ಲ್ಯೂ: 3**

ದಿನಾಂಕ **30-10-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಅರ್ಜಿದಾರರ ಪರ: ಶ್ರೀ ಎನ್ ಆರ್ ಕೆ ವಕೀಲರಿಂದಃ</u>

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

<u>ಪಾಟೀ ಸವಾಲುಃ ಎದುರುದಾರರ ಪರ: ಶ್ರೀ ಸಿ ಎಸ್ ಎಂ ಪಿ ವಕೀಲರಿಂದಃ</u>

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ಸಾಕ್ಷಿಗೆ ಅವರ ಪ್ರಮಾಣ ಪತ್ರ ತೋರಿಸಿ ಅದರಲ್ಲಿ ಬರೆದಿರುವ ಅಂಶಗಳ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ಅದು ಆಂಗ್ಲ ಭಾಷೆಯಲ್ಲಿ ಇದೆ, ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಹಾಗೂ ಅರ್ಜಿದಾರನ ಮನೆಗಳ ನಡುವೆ 1 ಕಿಮೀ ಅಂತರ ಇದೆ. ಅರ್ಜಿದಾರ ಜಾಗಕ್ಕೆ ಸಂಬಂಧಿಸಿದಂತೆ ದಾವೆ ದಾಖಲಿಸಿದ್ದರು. ಸದರಿ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅರ್ಜಿದಾರರು ಹಾಗೂ ಎದುರುದಾರರು ಅಣ್ಣ-ತಮ್ಮಂದಿರಾಗಿದ್ದು ಪರಸ್ಪರ ಜಗಳಾಡಿರುತ್ತಾರೆ ಎಂಬುದನ್ನು ಕೇಳಿದ್ದೇನೆ ಅದರೆ ಯಾವ ವಿಷಯಕ್ಕೆ ಜಗಳವಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷನಾಗಿರುತ್ತೇನೆ ಎಂದರೆ ಸರಿ. ನಾನು ಬಿ ಜೆ ಪಿ ಹಾಗೂ ಜೆ ಡಿ ಎಸ್ ಪಕ್ಷದ ಬೆಂಗಲಿತನಾಗಿದ್ದು, ಎದುರುದಾರರು ಕಾಂಗ್ರೆಸ್ ಪಕ್ಷದ ಬೆಂಬಲಿಗರಾಗಿದ್ದರು ಎಂದರೆ ಸರಿ. ನಿಮಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಜಾಗಕ್ಕೆ ಸಂಬಂದಿಸಿದಂತೆ ಜಗಳವಾಡಿದ್ದರು ಹಾಗೂ ನಾವು ಪಂಚಾಯಿತಿ ಮಾಡಿದ್ದೆವು ಎಂದು ನುಡಿಯುತ್ತಾರೆ. ನನಗೆ ಸದರಿ ಜಾಗದ ಪಂಚಾಯಿತಿ ನಂಬರು ಗೊತ್ತಿಲ್ಲ. ನಾವು ಪಂಚಾಯಿತಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಪಂಚಾಯಿತಿಯಲ್ಲಿ ಸುಮಾರು ಜನರು ಸೇರಿದ್ದರು ಹಾಗಾಗಿ ನನಗೆ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಪಂಚಾಯಿತಿ ಮಾಡುವ ಮೊದಲೇ ಎದುರುದಾರರು ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಈಗ 4-5 ವರ್ಷಗಳ ಹಿಂದೆ ಪಂಚಾಯಿತಿ ಮಾಡಿದ್ದೆವು. ಪಂಚಾಯಿತಿಯಲ್ಲಿ ಸಮಸ್ಯೆ

ಬಗೆಹರಿಯಲಿಲ್ಲ. ಎದುರುದಾರರು 2020 ರಲ್ಲಿ ಮನೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಎದುರುದಾರರೊಂದಿಗಿನ ರಾಜಕೀಯ ದ್ವೇಶದಿಂದ ಅವರ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ